**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 128 ಗ್ರಾನೀಸ(4)2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:29.08.2013

**ಸುತ್ತೋಲೆ**

**ವಿಷಯ:** ಕುಡಿಯುವ ನೀರಿನ ಕರವಸೂಲಿ ಮಾರ್ಗಸೂಚಿಗಳು.

**ಉಲ್ಲೇಖ:** 1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ/384/ಗ್ರಾಪಂಅ/2002, ದಿ:23.11.2002.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ/137/ಗ್ರಾನೀಸ(4)/2007, ದಿ:05.10.2007.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/12/ಗ್ರಾನೀಸ(4)/2011(ಪಿ), ದಿ:12.03.2013.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ/37/ಗ್ರಾನೀಸ(2)/2013, ದಿ:27.03.2013.
5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/843/ಗ್ರಾನೀಸ/2003, ದಿ:01.10.2005.

---

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆ ಸೇವೆಗನುಗುಣವಾಗಿ ನೀರಿನ ಕರವಸೂಲಿ ಮಾಡಲು ಮತ್ತು ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ **(O&M)** ಸಲುವಾಗಿ **VWSC**ಗಳನ್ನು ರಚಿಸಲು ಉಲ್ಲೇಖ (4)ರಲ್ಲಿ ಈಗಾಗಲೇ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಿಳಿಸಲಾಗಿದೆ. ಇದಲ್ಲದೇ, ಗ್ರಾಮ ಪಂಚಾಯಿತಿಗಳು ನಿರ್ವಹಣೆ ಮಾಡುವಂತಹ ಕುಡಿಯುವ ನೀರಿನ ಯೋಜನೆಗಳ ಸಾರ್ವಜನಿಕ ನಲ್ಲಿಗಳ ಬಳಕೆ ಮತ್ತು ಮನೆ ಸಂಪರ್ಕಕ್ಕೆ ವಿಧಿಸಬೇಕಾಗಿರುವ ನೀರಿನ ಶುಲ್ಕ ಕುರಿತಂತೆ ಈಗಾಗಲೇ ಉಲ್ಲೇಖ(2)ರನ್ವಯ ಕ್ರಮವಹಿಸಬೇಕಾಗಿರುತ್ತದೆ. ಇದನ್ನು ಉಲ್ಲೇಖ (3)ರ **(O&M)** ನೀತಿಗೆ ಅನುಗುಣವಾಗಿ ಇನ್ನಷ್ಟು ಶಿಸ್ತಿನಿಂದ ಸದೃಢಗೊಳಿಸಬೇಕಾಗಿದೆ.

ಮೇಲ್ಕಂಡ ಹಿನ್ನೆಲೆಯಲ್ಲಿ ಮುಂದುವರೆದಂತೆ ಕೆಳಕಂಡ ಮಾರ್ಗಸೂಚಿಗಳನ್ನು ನೀಡಿದೆ.

1. ಕರ್ನಾಟಕ ಪಂ.ರಾಜ್ ಅಧಿನಿಯಮ, **1993**ರ **ಪ್ರಕರಣ 199 (2)**ರಂತೆ ಗ್ರಾಮ ಪಂಚಾಯಿತಿಯು ಕುಡಿಯುವ ನೀರು ಮತ್ತು ಇತರೆ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡಲು, ನೀರಿನ ದರವನ್ನು ವಿಧಿಸಬಹುದಾಗಿದೆ. ಈ ಬಗ್ಗೆ ಕೆಳಕಂಡಂತೆ ವಿಧಿಸಬಹುದು.

   ಅ) ಮನೆ ಸಂಪರ್ಕ ಹೊಂದಿರುವ ಕುಟುಂಬದಲ್ಲಿನ ಸದಸ್ಯರ ಸಂಖ್ಯೆ ಒಬ್ಬರು, ಇಬ್ಬರು ಅಥವಾ ಮೂವರು ಮಾತ್ರ ಇದ್ದರೆ, ಕೌಟುಂಬಿಕ ಕುಡಿಯುವ ನೀರಿನ ವ್ಯವಸ್ಥೆಗಾಗಿ ರಿಯಾಯಿತಿ ದರದಲ್ಲಿ ಅಂದರೆ **ಕನಿಷ್ಠ ಮಾಸಿಕ ರೂ.30/- ರಂತೆ ಪ್ರತಿ ಮಾಹೆ** ನೀರಿನ ಕರವಸೂಲಿ ಮಾಡಬೇಕು.

   ಆ) ಸದಸ್ಯರ ಸಂಖ್ಯೆ ಮೂರಕ್ಕಿಂತ ಹೆಚ್ಚಿನ ಕೌಟುಂಬಿಕ ಸದಸ್ಯರು ಇದ್ದಲ್ಲಿ, ಅದಕ್ಕನುಗುಣವಾಗಿ ನೀರಿನ ಬಳಕೆ ಹೆಚ್ಚಾಗುವುದರಿಂದ **ಪ್ರತಿಯೊಬ್ಬರಿಗೆ ರೂ.10/-**ರಂತೆ ನೀರಿನ ಕರ ವಸೂಲು ಮಾಡಲು ಆಯಾ ಗ್ರಾಮ ಪಂಚಾಯಿತಿಗಳು ಮುಂದಿನ ಗ್ರಾಮ ಪಂಚಾಯಿತಿ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಚರ್ಚಿಸಿ ಠರಾವು ಮಾಡಿ ಕ್ರಮವಹಿಸಬೇಕು.

   ಇ) ಕುಟುಂಬದ ಸದಸ್ಯರ ಸಂಖ್ಯೆಯ ನಿರ್ಣಯವನ್ನು ಪಡಿತರ ಚೀಟಿ ಆಧಾರದ ಮೇಲೆ ಮಾಡಬೇಕು.

2. ಕೌಟುಂಬಿಕ ಸಂಪರ್ಕವಲ್ಲದೇ ಸಾರ್ವಜನಿಕ ನಲ್ಲಿ (ಮನೆ ಸಂಪರ್ಕ ಹೊಂದಿರದ ಕುಟುಂಬಗಳು) ಸಂಪರ್ಕಗಳಿಗೆ **ಪ್ರತಿ ಮಾಹೆ ಕನಿಷ್ಠ ರೂ.20/-ನಂತೆ** ನೀರಿನ ಕರವಸೂಲಿ ಮಾಡಬೇಕು. ಜೊತೆಗೆ ಅಂತಹ ನಲ್ಲಿಗಳಲ್ಲಿ ನೀರು **ಪೋಲಾಗದಂತೆ / ದುರ್ಬಳಕೆಯಾಗದಂತೆ** ಎಲ್ಲಾ ಅಗತ್ಯ ಮುಂಜಾಗ್ರತಾ ಕ್ರಮವಹಿಸಬೇಕು.

3. ಮನೆ ಸಂಪರ್ಕವಲ್ಲದೇ ಗೃಹಬಳಕೆಯಲ್ಲದ ಅಂದರೆ, ವಾಣಿಜ್ಯೋದ್ಯಮ / ಸಂಕೀರ್ಣಗಳಿಗೆ ನೀರಿನ ಸಂಪರ್ಕ ನೀಡಿದಾಗ ಅಂತಹ ಬಳಕೆದಾರರಿಗೆ, ಮನೆ ಸಂಪರ್ಕಗಳಿಗೆ ವಿಧಿಸಿದ ಮಾಸಿಕ ದರಕ್ಕಿಂತ **ದುಪ್ಪಟ್ಟು** ಮತ್ತು ಅಂತಹ ಸಂಪರ್ಕಗಳ ಮೀಟರ್‌ಗಳನ್ನು **ನೀರಿನ ಬಳಕೆ ಆಧಾರದ ಮೇಲೆ ನೀರಿನ ಶುಲ್ಕ** ವಿಧಿಸಿ ಕರವಸೂಲಿ ಮಾಡಬೇಕು.

4. ಕರ್ನಾಟಕ ಪಂ.ರಾಜ್ ಅಧಿನಿಯಮ **1993**ರ **ಪ್ರಕರಣ 61-ಎ** ರಂತೆ ಗ್ರಾಮ ಪಂಚಾಯಿತಿಗಳು, **61ನೇ** ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳನ್ನು ಹೊರತುಪಡಿಸಿ, ಇತರೆ ಯಾವುದೇ ಉದ್ದೇಶಕ್ಕಾಗಿ ಸಮಿತಿಗಳನ್ನು ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ, ಗ್ರಾಮ ಪಂಚಾಯಿತಿಗಳು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ **(VWSC)** ಸಮಿತಿಯನ್ನು ನೇಮಕ ಮಾಡಿಕೊಳ್ಳಬಹುದಾಗಿದೆ. ಈ ಸಂಬಂಧ ಸರ್ಕಾರವು ಉಲ್ಲೇಖ(4) ಮತ್ತು (5)ರಲ್ಲಿ ಹೊರಡಿಸಿರುವ ಸುತ್ತೋಲೆ / ಆದೇಶದಲ್ಲಿನ

...2

ನಿರ್ದೇಶನಗಳನ್ನು ಪಾಲಿಸಬೇಕು. ಅದರಂತೆ, ಸದರಿ ಸಮಿತಿಯನ್ನು ಇದುವರೆವಿಗೂ ನೇಮಕ ಮಾಡದೇ ಇರುವ ಗ್ರಾಮ ಪಂಚಾಯಿತಿಗಳು ಕೂಡಲೇ ಸದರಿ ಸಮಿತಿಗಳನ್ನು ನೇಮಕ ಮಾಡಿ, ಉಲ್ಲೇಖ(4)ರ **O&M** ನೀತಿ ಆದೇಶದ ರೀತಿಯಲ್ಲಿ ಕಾಲಮಿತಿಯೊಳಗೆ ಎಲ್ಲಾ ಕುಟುಂಬಗಳ ಮನವೊಲಿಸಿ, **VWSC**ಗಳ ಸಮನ್ವಯದಲ್ಲಿ (ಗ್ರಾಮ ಪಂಚಾಯಿತಿ 50% : 50% ಫಲಾನುಭವಿ ಕುಟುಂಬ) ಮೀಟರಿಂಗ್ ವ್ಯವಸ್ಥೆ ಅಳವಡಿಸಿಕೊಳ್ಳಲು ಉತ್ತೇಜನ ನೀಡಬೇಕು. ಇದರಿಂದ ಅತ್ಯಮೂಲ್ಯವಾದ ಕುಡಿಯುವ ನೀರಿನ ಪೂರೈಕೆ ಮತ್ತು ಬಳಕೆಯಲ್ಲಿ ಸಮರ್ಪಕವಾದ ವ್ಯವಸ್ಥೆಯಾಗುವಂತೆ ನೋಡಿಕೊಳ್ಳಬಹುದಾಗಿರುವುದರಿಂದ ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಪ್ರಥಮ ಆದ್ಯತೆ ನೀಡಬೇಕೆಂದು ಕೋರಿದೆ.

(ನವೀನ್ ರಾಜ್ ಸಿಂಗ್)
ನಿರ್ದೇಶಕರು, (SWSM)
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ರಾಜ್ಯದ ಎಲ್ಲಾ **(30)** ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರುಗಳು ಮತ್ತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ **(176)** ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷರುಗಳು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ).
4. Google group e-mail & Dept website.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ, ನಂ.55, 4ನೇ ಮಹಡಿ, ಅಭಯ ಸಂಕೀರ್ಣ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, **ಬೆಂಗಳೂರು-20**. ಇವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
6. ರಾಜ್ಯದ ಎಲ್ಲಾ **(8)** ಅಧೀಕ್ಷಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳು.
7. ರಾಜ್ಯದ ಎಲ್ಲಾ **(38)** ಕಾರ್ಯಪಾಲಕ ಇಂಜಿನಿಯರ್‌ಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು-01.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ ವಿಧಾನಸೌಧ, ಬೆಂಗಳೂರು-01.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಗ್ರಾಅಪಂ.ರಾಜ್ ಇಲಾಖೆ ಹಾಗೂ ಗ್ರಾಅಪಂ.ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು / ಆಂತರಿಕ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
4. ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ, **(DMC)** ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು-01.
5. ಅಪರ ನಿರ್ದೇಶಕರು / ಆರ್ಥಿಕ / ಕಾರ್ಯಚರಣೆ, **SWSM** ಕಾವೇರಿ ಭವನ, ಬೆಂಗಳೂರು-9.
6. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.